**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ. ನಂ.57/2019**

ಸಿಡಬ್ಲ್ಯೂ಼ಃ **20**
ಪಿಡಬ್ಲ್ಯೂ಼ಃ **8**

<u>ದಿನಾಂಕಃ **12-12-2024**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರು | - | ಶ್ವೇತಾ |
| ತಂದೆಯ ಹೆಸರು | - | ಮೋಹನರಾಜ್ |
| ವಯಸ್ಸು | -? | **23** ವರ್ಷ |
| ಉದ್ಯೋಗ | - | ಮನೆ ಕೆಲಸ |
| ವಾಸಸ್ಥಳಃ | - | ಯಾದಗಿರಿ. |

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ</u>

ಚಾಸಾ-1 ರವರ ಪರಿಚಯ ನನಗೆ ಇರುತ್ತದೆ. ಚಾಸಾ-17 ರಿಂದ 19 ಮತ್ತು 21 ರಿಂದ 23 ರವರ ಪರಿಚಯ ನನಗೆ ಇರುತ್ತದೆ. ಮೃತ ಏಲಿಜಬೆತ್ ಮತ್ತು ಜಾನ್ ಪಾಲ್ ಮತ್ತು **Stifen peter** ಮತ್ತು ಬಸವರಾಜ ರವರ ಪರಿಚಯ ಇರುತ್ತದೆ. ನಾವೆಲ್ಲರೂ ಕೂಡಿಕೊಂಡು ಮೇ 31 ರ 2018 ರಂದು ಸಾಯಂಕಾಲ 6-00 ಗಂಟೆಗೆ ಪ್ರಾರ್ಥನೆಗೊಸ್ಕರ ಗಾಜರಕೋಟ ಗ್ರಾಮಕ್ಕೆ ಕಮಾಂಡರ ಜೀಪನಲ್ಲಿ ಹೋಗುತ್ತಿದ್ದೇವು. ಅಲ್ಲಿ ಪ್ರಾರ್ಥನೆಯನ್ನು ಮುಗಿಸಿ ಬರುತ್ತಿರುವಾಗ ಆಶನಾಳ ದಾಟಿದ ಮುಂಡರಗಿ ಗೇಟ್ ಹತ್ತಿರ ಅಪಘಾತ ಆಗಿರುತ್ತದೆ. ಒಂದು ಬೂದಿ ಟ್ಯಾಂಕರ್ ಬಂದು ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿ ಮುಂದೆ ಸದರಿ ವಾಹನವು ಬೇವಿನ ಗಿಡಕ್ಕೆ ಡಿಕ್ಕಿ ಪಡಿಸಿರುತ್ತದೆ. ಸದರಿ ಅಪಘಾತದಿಂದ ನನ್ನ ಬಲಗೈ ಮುರಿದಿರುತ್ತದೆ, ಅದೇ ರೀತಿ ಎಡಗಣ್ಣಿನ ಮೇಲೆ ಗಾಯಗಳು ಆಗಿದ್ದರಿಂದ ಹೊಲಿಗೆಯನ್ನು ಹಾಕಿರುತ್ತಾರೆ. ಸದರಿ ಅಪಘಾತದಿಂದ ನನ್ನ ತಂಗಿ ಶಿಲ್ಪರಾಣಿ ರವರಿಗೆ ದಾವುಡೆ ಹೊಡೆದು ಹೋಗಿತ್ತು. ಅದೇ ರೀತಿ ಚಾಸಾ-17 ರವರಿಗೆ ನಮ್ಮ ಜೀಪಿನ ಹಿಂಬದಿಯ ಶೀಟು ಗುತ್ತಿಗೆಯ ಹಿಂದೆ ಬಲವಾದ ಏಟು ಬಿದ್ದಿದ್ದರಿಂದ ಗುತ್ತಿಗೆಯಲ್ಲಿ ನೋವು ಆಗಿತ್ತು. ಸದರಿ ಅಪಘಾತದಿಂದ ಜಾನ್ ಪಾಲ್ ಮತ್ತು ಏಲಿಜಬೆತ್ ಮತ್ತು ಬಸವರಾಜ ರವರು ಮೃತಪಟ್ಟಿರುತ್ತಾರೆ. ಅಪಘಾತವು ರಾತ್ರಿ 10 ಗಂಟೆಗೆ ಆಗಿತ್ತು. ಜಾನ್ ಪಾಲ್

ರವರ ಮಗನಾದ **Stifen peter** ರವರನ್ನು ತುರ್ತು ಚಿಕಿತ್ಸ ವಾಹನದಲ್ಲಿ ಕರೆದುಕೊಂಡು ಹೋಗುವಾಗ ರಸ್ತೆಯ ಮಧ್ಯದಲ್ಲಿ ಆತನು ಮೃತಪಟ್ಟಿರುತ್ತಾನೆ. ಅದೇ ರೀತಿ ನನ್ನನ್ನು ಸದರಿ ವಾಹನದಲ್ಲಿ ಕರೆದುಕೊಂಡು ಹೋಗಿದ್ದರು. ಸದರಿ ಅಪಘಾತವು ನಮ್ಮಗೆ ಡಿಕ್ಕಿಪಡಿಸಿದ ಬೂದಿ ಟ್ಯಾಂಕರ್ ಚಾಲಕನ ತಪ್ಪಿ ನಿಂದ ಆಗಿರುತ್ತದೆ. ನಾನು ಹೇಳಿಕೆಯನ್ನು ಯಾರ ಮುಂದ ಸಹ ಕೊಟ್ಟಿರುವುದಿಲ್ಲ. ನಾನು ಕಮಾಂಡರ ಜೀಪು ಮತ್ತು ಬೂದಿ ಟ್ಯಾಂಕರ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಕಮಾಂಡರ್ ಜೀಪಿ ಮತ್ತು ಬೂದಿ ಟ್ಯಾಂಕರ ನ ಪೋಟೋಗನ್ನು ನೋಡಿ ಗುರುತಿಸಿರುತ್ತಾರೆ ಸದರಿ ಛಯಾಚಿತ್ರ ಗಳನ್ನು ಈಗಾಗಲೇ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ. ರವರು ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅವರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಸ.ಸ.ಅ ರವರಿಂದಃ

ಈ ರೀತಿಯಾಗಿ ಅಪಘಾತ ಆಗಿರುತ್ತದೆ ಎಂದು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಬೂದಿ ಟ್ಯಾಂಕರ ಚಾಲಕನ ಹೆಸರು ಆನಂದಪ್ಪ ತಂದೆ ಮಹಾದೇವಪ್ಪ ಜಾಮದಾರ ಸಾಃ ಭವಾನಿ ನಗರ ಕಲಬುರಗಿ ಇರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಬೂದಿ ಟ್ಯಾಂಕರ್ ವಾಹನದ ಸಂಖ್ಯೆಃ ಕೆಎ**-22-**ಬಿ**-7049** ಇರುತ್ತದೆ ಎಂದರೆ ಸರಿ.

ಪಾಟೀ ಸವಾಲುಃ **1** ನೇ ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಆರ್ ರವರಿಂದಃ

ಆವತ್ತು ನಮ್ಮ ಜೀಪಿನಲ್ಲಿ 13 ಜನರು ಇದ್ದೇವು. ಗಾಜರಕೋಟ ಗ್ರಾಮದಿಂದ ಆಶನಾಳ ಮೂಲಕ ಬರುತ್ತಿದ್ದೇವು. ಆಶನಾಳ ಗ್ರಾಮ ರಸ್ತೆಯು ಅಗಲ ಮತ್ತು ದೊಡ್ಡ ರಸ್ತೆ ಇರುತ್ತದೆ ಎಂದರೆ ಸರಿ. ಅಲ್ಲಿ ರಸ್ತೆ ವಿಭಜನೆ ಇರುತ್ತದೆ ಎಂದರೆ ಸಾಕ್ಷಿಯು ನಾವು ಆಶನಾಳದಿಂದ ಬರುವಾಗ ರಸ್ತೆ ಕಾಮಗಾರಿ ಚಾಲ್ತಿಯಲ್ಲಿ ಇತ್ತು ಎಂದು ಹೇಳುತ್ತಾರೆ. ಸದರಿ ರಸ್ತೆಯ ಮೇಲೆ ಸಾಕಷ್ಟು ವಾಹನಗಳು ಚಲಾಸುತ್ತಿದ್ದವು ಎಂದರೆ ಸರಿ. ರಾತ್ರಿ ಸಮಯದಲ್ಲಿ ವಾಹನದ ಸವಾರರು ಲೈಟನ್ನು ಹಾಕಿಕೊಂಡು ಚಲಾಯಿಸುತ್ತಿದ್ದರು ಎಂದರೆ ಸಾಕ್ಷಿಯು ಆವತ್ತು ಜೀಟಿ ಜೀಟಿಯಾಗಿ ಮಳೆ ಬರುತ್ತಿತ್ತು ಎಂದು ಹೇಳುತ್ತಾರೆ. ರಾತ್ರಿಯ ಸಮಯದಲ್ಲಿ ವಾಹನ ಸವಾರರು ಲೈಟಗಳನ್ನು ಹಾಕಿಕೊಂಡು ಚಲಾಯಿಸುತ್ತಿರುವಾಗ ಸದರಿ ವಾಹನದ ಬೆಳಕು ಮುಂದುಗಡೆ ಬರುತ್ತಿದ್ದ ವಾಹನಗಳ ಮೇಲೆ ಬಿದ್ದಾಗ ಮುಂದೆ ಬರುತ್ತಕ್ಕಂತ ವಾಹನಗಳು

ಕಾಣುವುದಿಲ್ಲ ಎಂದರೆ ಸರಿ. ಆದ್ದರಿಂದ ರಾತ್ರಿ ಸಮಯದಲ್ಲಿ ವಾಹನವು ಯಾವ ರೀತಿಯಾಗಿ ಬರುತ್ತಿತ್ತು ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ಸದರಿ ವಾಹನವು ವೇಗವಾಗಿ ಬಂದಿತ್ತು ಎಂದು ಹೇಳುತ್ತಾರೆ.

ಆದ್ದರಿಂದ ಬೂದಿ ವಾಹನದ ಚಾಲಕನು ಯಾರು ಇರುತ್ತಾನೆ ಎಂದು ನನಗೆ ಗುರುತು ಹಿಡಿಯಲು ಆಗುವುದಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ ಪ್ರಕಾರ ನಾನು ವಾಹನದ ಚಾಲಕನ ಹೆಸರುನು ಹೇಳುತ್ತಿದ್ದೇನೆಂದರೆ ಸರಿ. ಬೂದಿ ಟ್ಯಾಂಕರಿನ ಚಾಲಕನ ತಪ್ಪಿನಿಂದ ಅಪಘಾತ ಆಗದೇಇದ್ದರು ಅಪಘಾತ ಪರಿಹಾರವನ್ನು ಪಡೆಯುವ ಸಲುವಾಗಿ ಆತನ ತಪ್ಪಿನಿಂದಲ್ಲೇ ಅಪಘಾತ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಜೀಪಿನ ಚಾಲಕನಾದ ಬಸವರಾಜನು ಚಾಲನಾ ಪರವಾನಿಗೆ ಪತ್ರವನ್ನು ಹೊಂದಿದ್ದನೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಆತನು ಕೋಟಗೇರಿ ಗ್ರಾಮದವನು ಆಗಿರುತ್ತಾನೆ ಎಂದು ಗೊತ್ತಿರುತ್ತದೆ. ಆಸ್ಪತ್ರೆಗೆ ಬಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಪೊಲೀಸರು ಆಸ್ಪತ್ರೆಗೆ ಬಂದು ನನಗೆ ಎಲಲ್ಲಿ ಗಾಯಗಳು ಆಗಿರುತ್ತವೆ ಎಂದು ನನ್ನನ್ನು ವಿಚಾರಿಸಿರುತ್ತಾರೆ. ಪೊಲೀಸರು ಹೇಳಿದ ಮೇರೆಗೆ ನನಗೆ ಬೂದಿ ಗಾಡಿಯ ಟ್ಯಾಂಕರ ನಂಬರ್ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾವೆಲ್ಲರೂ 13 ಜನ ಒಂದೇ ಜನಾಂಗದವರು ಆಗಿರುವ ಕಾರಣ ಬೂದಿ ಟ್ಯಾಂಕರನ ಚಾಲಕನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.